(49) (8)

**<u>ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಐವನ್ ಡಿ'ಸೋಜಾ, ಶ್ರೀ ಮಂಜುನಾಥ ಭಂಡಾರಿ ಹಾಗೂ ಇತರರು ನಿಯಮ 330 ರಡಿ ಮಂಡಿಸಿರುವ ಸೂಚನೆಗೆ ಉತ್ತರ.</u>**

*****

**<u>ವಿಷಯ</u>**: ದಕ್ಷಿಣ ಕನ್ನಡ ಮೂಲ್ಕಿ ತಾಲ್ಲೂಕಿನ ಬಳ್ಕುಂಜೆ, ಕೊಲ್ಲೂರು ಮತ್ತು ಉಳೆಪಾಡಿ ಗ್ರಾಮಗಳ 1091 ಎಕರೆ ಪ್ರದೇಶದಲ್ಲಿ ಕೆ.ಐ.ಎ.ಡಿ.ಬಿ.ಯ ಕೈಗಾರಿಕಾ ವಲಯ ನಿರ್ಮಾಣಕ್ಕಾಗಿ ಸರ್ಕಾರ ಹೊರಡಿಸಿರುವ 28(1) ರ ಅಧಿಸೂಚನೆಯನ್ನು ರದ್ದುಪಡಿಸುವಂತೆ ಸ್ಥಳೀಯ ರೈತರು, ಕೃಷಿಕರು, ಸಣ್ಣ ಹಿಡುವಳಿದಾರರು, ಕೋಳಿ ಸಾಕಣೆಗಾರರು, ಹೈಗುಗಾರಿಕೆಯಿಂದ ಬದುಕು ಕಟ್ಟಿಕೊಂಡವರು, ಧಾರ್ಮಿಕ ಕಾಂತಾಬಾರೆ ಬೂದಾಬಾರೆ ಜನ್ಮ ಕ್ಷೇತ್ರ, ಕಾರಣಿಕ ಪುರುಷರು ಸ್ಥಳವಾದ ಭೂಮಿಯನ್ನು ಯಾವುದೇ ಕಾರಣಕ್ಕೂ ಬಿಟ್ಟು ಕೊಡುವುದಿಲ್ಲ ಎಂದು ಪ್ರತಿಭಟನೆ ನಡೆಸುತ್ತಿದ್ದು, ಸದರಿ ಗ್ರಾಮಗಳಿಂದ ಸುಮಾರು 20 ಗ್ರಾಮಗಳಿಗೆ ಕುಡಿಯುವ ನೀರು ಪೂರೈಕೆ ಮಾಡುವ ಯೋಜನೆ ಇಲ್ಲಿ ಅನುಷ್ಠಾನಗೊಂಡಿದ್ದು, ಸಮೀಪದಲ್ಲಿ ನೀರು ಶುದ್ಧೀಕರಿಸಿ ಪೈಪ್ ಲೈನ್ ಮೂಲಕ 20 ಗ್ರಾಮಗಳಿಗೆ ನೀರು ಸರಬರಾಜು ಮಾಡುವ ಮೂರು ಗ್ರಾಮದ ಭೂಮಿ ಯಾವುದೇ ಕಾರಣಕ್ಕೂ ಬಿಟ್ಟುಕೊಡುವುದಿಲ್ಲ ಎಂದು ಬಳ್ಕುಂಜೆ, ಕೊಲ್ಲೂರು ಮತ್ತು ಉಳೆಪಾಡಿ ಗ್ರಾಮಸ್ಥರು ಭೂಸಂತ್ರಸ್ಥರ ಸಂಘದ ಹೋರಾಟದಾರರಿಗೆ ಮತ್ತು ಈ ತಾಲ್ಲೂಕಿನ 191 ಎಕರೆ ಪ್ರದೇಶ ಭೂಮಿಯನ್ನು ಕೈಬಿಡಬೇಕೆಂಬ ಸಾರ್ವಜನಿಕ ಮಹತ್ವವುಳ್ಳ ವಿಚಾರವಾಗಿರುವುದರಿಂದ ನಿಯಮ 330 ರಡಿಯಲ್ಲಿ ವಿಷಯ ಪ್ರಸ್ತಾಪಿಸಲು ಬಯಸುತ್ತೇನೆ.

********

**<u>ಉತ್ತರ</u>**:

ದಕ್ಷಿಣ ಕನ್ನಡ ಜಿಲ್ಲೆ ಮುಲ್ಕಿ ತಾಲೂಕಿನ ಬಳ್ಕುಂಜೆ, ಕೊಲ್ಲೂರು ಮತ್ತು ಉಳೆಪಾಡಿ ಗ್ರಾಮಗಳಲ್ಲಿ ಕೈಗಾರಿಕಾ ಪ್ರದೇಶಕ್ಕಾಗಿ ಕೆ.ಐ.ಎ.ಡಿ.ಬಿ. ಕಾಯ್ದೆ ಕಲಂ 28(1) ರಡಿ ಭೂಸ್ವಾಧೀನಕ್ಕಾಗಿ ಹೊರಡಿಸಿರುವ ಪ್ರಾಥಮಿಕ ಅಧಿಸೂಚನೆ ಸಂಖ್ಯೆ ಸಿಐ 155 ಎಸ್.ಪಿ.ಕ್ಯೂ (ಇ) 2021 ದಿನಾಂಕ:07.01.2022 ರ ವಿವರಗಳು ಈ ಕೆಳಗಿನಂತಿವೆ:

| ತಾಲೂಕು | ಗ್ರಾಮ | ವಿಸ್ತೀರ್ಣ (ಎ.ಸೆಂ) | | ಒಟ್ಟು ವಿಸ್ತೀರ್ಣ (ಎ.ಸೆಂ) |
|---|---|---|---|---|
| | | ಖಾಸಗಿ | ಸರ್ಕಾರಿ | |
| ಮುಲ್ಕಿ | 29-**ಕೊಲ್ಲೂರು** | 324.3500 | 58.9350 | 383.2850 |
| | 24-**ಬಳ್ಕುಂಜೆ** | 301.8850 | 52.95 | 354.8350 |
| | 28 **ಉಳೆಪಾಡಿ** | 323.4950 | 29.9550 | 353.4500 |
| | **ಒಟ್ಟು** | **949.7300** | **141.8400** | **1091.5700** |

ಸದರಿ ಭೂಸ್ವಾಧೀನಕ್ಕೆ ಸಂಬಂಧಿಸಿದಂತೆ ಕಲಂ 28(2) ರಡಿ ನೋಟೀಸು ನೀಡಿ ಕಲಂ 28(3) ರ ವಿಚಾರಣೆ ನಡೆಸಲಾಗಿದ್ದು, ಸದರಿ ವಿಚಾರಣೆ ಸಂದರ್ಭದಲ್ಲಿ ಪ್ರಸ್ತಾವಿತ ಅಧಿಸೂಚನೆಯಲ್ಲಿ ಒಳಗೊಂಡಿರುವ ಕೊಲ್ಲೂರು, ಬಳ್ಕುಂಜೆ ಮತ್ತು ಉಳೆಪಾಡಿ ಗ್ರಾಮಗಳ ಕೆಲವು ಜಮೀನಿನ ಮಾಲೀಕರುಗಳು ತಮ್ಮ ಜಮೀನುಗಳ ಸ್ವಾಧೀನತೆಯ ಬಗ್ಗೆ ಪ್ರಾಥಮಿಕವಾಗಿ ಒಪ್ಪಿಗೆ ಸೂಚಿಸದೇ ಇರುವುದು ಕಂಡುಬಂದಿರುತ್ತದೆ. ಜೊತೆಯಲ್ಲಿ ಗ್ರಾಮ ಪಂಚಾಯ್ತಿ ಹಾಗೂ ಹಾಲು ಉತ್ಪಾದಕರ ಸಹಕಾರ ಸಂಘ ಮತ್ತಿತರರು ಸಹ ಆಕ್ಷೇಪಣೆ ಸಲ್ಲಿಸಿರುತ್ತಾರೆ.

...2

ದಕ್ಷಿಣ ಕನ್ನಡ ಜಿಲ್ಲೆ, ಮುಲ್ಕಿ ತಾಲ್ಲೂಕಿನ, ಕೊಲ್ಲೂರು, ಬಳ್ಕುಂಜೆ ಮತ್ತು ಉಳೆಪಾಡಿ ಗ್ರಾಮಗಳಲ್ಲಿಯೂ ಸಹ ಮಂಡಳಿಯು ಕೈಗಾರಿಕಾ ಪ್ರದೇಶಾಭಿವೃದ್ಧಿ ಯೋಜನೆಗಾಗಿ ಸುಮಾರು 1091-00 ಎಕರೆ ಪ್ರದೇಶಗಳನ್ನು ಸ್ವಾಧೀನಪಡಿಸುವ ಪ್ರಕ್ರಿಯೆ ಪ್ರಾರಂಭಿಸಿದ್ದು ಹಾಲಿ ಸರ್ವೆ ಕಾರ್ಯ ಪ್ರಗತಿಯಲ್ಲಿರುತ್ತದೆ. ಸದರಿ ಅಧಿಸೂಚಿತ ಒಟ್ಟು 1091-00 ಎಕರೆ ಪ್ರದೇಶದಲ್ಲಿ ಸುಮಾರು ಶೇ.90 ಕ್ಕಿಂತಲೂ ಹೆಚ್ಚಿನ ರೈತರುಗಳು ಭೂಸ್ವಾಧೀನ ಪ್ರಕ್ರಿಯೆಯನ್ನು ಬೆಂಬಲಿಸಿರುವುದು ಕಲಂ 28(3)ರ ವಿಚಾರಣೆ ವೇಳೆಯಲ್ಲಿ ಕಂಡುಬಂದಿರುತ್ತದೆ. ಉಳಿದಂತೆ ವಿರೋಧ ವ್ಯಕ್ತಪಡಿಸಿದ ಸುಮಾರು 191-00 ಎಕರೆ ಜಮೀನಿನಲ್ಲಿ ಒಂದೊಮ್ಮೆ ಕಟ್ಟಡಗಳು, ವಾಸದ ಮನೆಗಳು, ಮತ್ತಿತರೆ ಅಭಿವೃದ್ಧಿ ಚಟುವಟಿಕೆಗಳು ನಡೆದಿದ್ದಲ್ಲಿ ನಿಯಮಾನುಸಾರ ಪರಿಶೀಲಿಸಿ ಭೂಮಾಲೀಕರುಗಳಿಗೆ ಅನಾನುಕೂಲವಾಗದಂತೆ ಹಾಗೂ ಕೈಗಾರಿಕಾ ಪ್ರದೇಶದ ಆಯಕಟ್ಟಿಗೆ ತೊಂದರೆಯಾಗದಂತೆ ಕ್ರಮ ವಹಿಸಲಾಗುತ್ತದೆ.

ಮುಂದುವರೆದು, ಸದರಿ ಮೇಲ್ಕಂಡ ಕಟ್ಟಡ, ವಾಸದ ಮನೆ ಮತ್ತಿತರೆ ಅಭಿವೃದ್ಧಿ ಚಟುವಟಿಕೆಗಳು ಸ್ವಾಧೀನ ಪ್ರದೇಶಕ್ಕೆ ಹೊಂದಿಕೊಂಡು ಕೈಗಾರಿಕಾ ಪ್ರದೇಶದ ಆಯಕಟ್ಟಿಗೆ ತೊಂದರೆಯಾದಲ್ಲಿ ನಿಯಮಾನುಸಾರ ಪರಿಹಾರ ನಿಗದಿಪಡಿಸಿ ಪಾವತಿಸಲು ಕ್ರಮ ಜರುಗಿಸಲಾಗುತ್ತದೆ.

**(ಕಡತ ಸಂಖ್ಯೆ: ಸಿಐ 169 ಐಎಪಿ 2025)**

**(ಎಂ.ಬಿ. ಪಾಟೀಲ)**
ಬೃಹತ್ ಮತ್ತು ಮಧ್ಯಮ ಕೈಗಾರಿಕೆ
ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು